ಎಂ.ಎಸ್.ಗುರುರಾಜಾಚಾರ್, ಬಳ್ಳಾರಿ

ವಾಹನ ಹಿಂಬಾಲಿಸಿದರೆ ಧೂಳು, ಹುಡುಗಿಯನ್ನು ಹಿಂಬಾಲಿಸಿದರೆ ಗೋಳು, ರಾಜಕಾರಣಿಯನ್ನು ಹಿಂಬಾಲಿಸಿದರೆ?



ಮನೆಹಾಳು.

ಪಿ.ಎಸ್. ಶ್ರೀವತ್ಸ, ಬೆಂಗಳೂರು

ಈ ಬಾರಿ ಮೊಹರಂ ಹಾಗೂ ವೈಕುಂಠ ಏಕಾದಶಿ ಒಂದೇ ದಿನ ಬಂದುಬಿಟ್ಟಿವೆಯಲ್ಲಾ...?!

ಹಿಂದೂ–ಮುಸ್ಲಿಂ ಏಕತೆಯ ದೆಶೆಗೆ ಮೊಹರು ಒತ್ತಲು ಇದೇ ಸುದಿನವಂತೆ.

ಡಿ.ಎಸ್.ಪಂಕಜಸುಬ್ರಮಣ್ಯ, ಬೆಂಗಳೂರು

ಜಾಹಿರಾತಿನಲ್ಲಿ ಗಂಡಿಗೆ ಮೈತುಂಬಾ ಬಟ್ಟೆ, ಹೆಣ್ಣಿಗೆ ಕಾಲುಭಾಗ ಮಾತ್ರ ಹಾಕುವುದೇಕೆ?

ಅವರವರ ಅರ್ಧಾಂಗಿಗಳಿಗಿಂತಲೂ ಆಕರ್ಷಕವಾಗಿ ಕಾಣಬೇಕಾದರೆ ಹೆಣ್ಣು ಅರ್ಧದಲ್ಲಿ ಅರ್ಧ ಧರಿಸಬೇಕೆಂಬುದೇ ಜಾಹಿರಾತಿನ ನಿಯಮ.

ಕೆ.ಎಸ್.ನಾರಾಯಣರೆಡ್ಡಿ, ಕೆ.ಜಿ.ಎಫ್

ಪ್ರೇಮಿಗಳನ್ನು ಪಕ್ಷಿಗಳಿಗೇಕೆ ಹೋಲಿಸುತ್ತಾರೆ?



ರೆಕ್ಕೆ ಬಲಿತಾಕ್ಷಣ ಹಾರಿಹೋಗುವ ಗುಣ ಇರುವುದರಿಂದ.

ಬಿ.ಎಸ್.ರಾಘವೇಂದ್ರರಾವ್, ಬೆಂಗಳೂರು

ನಮ್ಮ ಪ್ರತಿಪಕ್ಷದ ಸದಸ್ಯರು ಭಾಜಪ ಸರ್ಕಾರವನ್ನು ಉರುಳಿಸುವುದಿಲ್ಲ ಎಂದು ಪದೇ ಪದೇ ಹೇಳುವುದರ ಮರ್ಮ?

ತಾನೇ ಬೀಳಲು ಸಾಮರ್ಥ್ಯವಿರುವಾಗ ನಮ್ಮ ಪ್ರಯತ್ನ ಬೇಕಿಲ್ಲ ಎಂಬುದಂತೆ.

ಎಂ.ಪಿ. ವಿಜಯಕುಮಾರ, ಸವದತ್ತಿ

ಯಾವುದರಲ್ಲಿ ಸುಖವಿದೆ, ಮದುವೆಗೆ ಮುಂಚೆಯೋ ಅಥವಾ ನಂತರವೋ?

ಮುಂಚೆಯೇ. ಕದ್ದು ಕಳೆದ ರಸನಿಮಿಷಗಳು ಮತ್ತೆ ಬಾರವು.

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ

ಹಣೆಬರಹ ಹೈವೇ, ಸ್ಪೀಡ್ ಬ್ರೇಕರ್ ಅದೃಷ್ಟವಾದರೆ, ದುರಾದೃಷ್ಟ ಯಾವುದು?

ಬಾಯಿ ತೆರೆದ ಮ್ಯಾನ್‌ಹೋಲ್.

ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ

ಸತ್ತು ಸಾಧಿಸುವುದೇನು?

ನೇತ್ರದಾನದ ಮೂಲಕ ಚಿರಕಾಲ ಬದುಕುವುದು.

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

ರಾಜಕಾರಣಿಗಳು ತ್ಯಾಗರಾಜ ರಾದರೆ?

ಆಗಿದ್ದಾರಲ್ಲಾ... ದೇಶತ್ಯಾಗರಾಜರು!

ಕೆ.ಹೊನ್ನಪ್ಪ, ಕ್ಯಾತ್ಸಂದ್ರ

ಆನಂದ ಮತ್ತು ಸಂತೋಷ — ಇವುಗಳಿಗೆ ಏನಾದರೂ ವ್ಯತ್ಯಾಸವಿದೆಯೇ?

ನೀವು ಗೆದ್ದಾಗ ಆಗುವುದು ಸಂತೋಷ, ಅನ್ಯರ ಗೆಲುವನ್ನೂ ನಿಮ್ಮದೆಂದು ಭಾವಿಸುವುದು ಆನಂದ.

ರಮೇಶ್, ಹನುಮನಾಳು

ಕೆಲವರು ಕುಡಿದಾಗ ತೂರಾಡುತ್ತಾರೆ, ಕಿರಿಚಾಡುತ್ತಾರೆ, ಕೂಗಾಡುತ್ತಾರೆ. ಮೂಗರು ಕುಡಿದರೆ?

ಮೂಗರು ತೂರಾಡುತ್ತಾರೆ, ಅವರನ್ನು ಸಾಕುವವರು ಕೂಗಾಡುತ್ತಾರೆ, ಕಿರಿಚಾಡುತ್ತಾರೆ.

ಎ.ಕೆ.ಪಟ್ಟಾಭಿ, ಬೆಂಗಳೂರು

ನೀವು ಕೇಳಿದಿರಿ ವಿಭಾಗಕ್ಕೆ ಅಸಂಖ್ಯಾತ ಪ್ರಶ್ನೆಗಳು ಬರುವುದರಿಂದ ನೀವು ಕೇಳದಿರಿ ಎನ್ನುವ ಪ್ರಸಂಗ ನಿಮಗೆ ಉದ್ಭವಿಸುವುದಿಲ್ಲವೇ?

ಓದುಗರ ಪ್ರಶ್ನೆಗಳ ವೈವಿಧ್ಯತೆ ಹರಿಯುವ ನದಿಯ ನಿನಾದದಂತೆ: ನಿತ್ಯವೂ ಶುದ್ಧ, ನೂತನ, ನಿರಂತರ, ಮೊಗೆದಷ್ಟೂ ಸಿಹಿ. ಅದು ಹೀಗೆಯೇ ಇರಲೆಂಬುದೇ ನಮ್ಮ ಆಶಯ.

ನಾರಾಯಣ, ಗುಗ್ಗರಹಟ್ಟಿ

ಕೆಲವರಿಗೆ ಸರಸ್ವತಿ ಒಲಿಯದಿದ್ದರೂ ಲಕ್ಷ್ಮಿ ತಬ್ಬಿಕೊಂಡಿರುತ್ತಾಳಲ್ಲಾ...?

ಸರಸ್ವತಿ ಶ್ರಮಪಕ್ಷದವಳು. ಲಕ್ಷ್ಮಿ ಪಕ್ಷೇತರಳಾದ್ದರಿಂದ ಮಾನ್ಯತೆ ಸಿಕ್ಕಲ್ಲಿ ತೂರಿಕೊಳ್ಳುತ್ತಾಳೆ.

## ಬಹುಮಾನಿತ ಪ್ರಶ್ನೆ

ಮೊಳಕಾಲ್ಮೂರು ಸುರೇಶ್, ಬಳ್ಳಾರಿ.

ಅಲ್ರಪ್ಪೋ ಹೊಸವರ್ಷದ ಸ್ವಾಗತಕ್ಕೆ ಕುಣಿತ, ಕುಡಿತ, ತುಂಡು ಕಡಿತ ಇರಬೇಕೆಂದು ಬಯಸುವವರಿಗೆ ನಿಮ್ಮ ಸಂದೇಶ?

ಕುಣಿತಕ್ಕೊಂದು ಕುಣಿಕೆ, ಕುಡಿತಕ್ಕೊಂದು ಕಡಿತ ತೊಡಿಸಿದರೆ ಮಬ್ಬು ಸರಿದು ಬೆಳಕು ಉಳಿದೀತು.

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ

ಅನಕ್ಷರಸ್ಥರಿಂದ ರಾಜ್ಯವಾಳಿಸಿಕೊಳ್ಳುವಾಗ ಎಡಗೈ ಹೆಬ್ಬೆಟ್ಟೇ ಏಕೆ? ಬಲಗೈ ಯಾಕಾಗಬಾರದು?

ಎಡವುವ ಎಡವಟ್ಟಿನ ಎಬಡರಿಗೆ ಎಡಬೆಟ್ಟೇ ಸರಿ ಭಟ್ಟರೇ.

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

ರಥಯಾತ್ರೆ, ಶೋಭಾಯಾತ್ರೆಗಳಿಗೂ, ಅಂತಿಮ ಯಾತ್ರೆಗೂ ವ್ಯತ್ಯಾಸ?

ಅಂತಿಮ ಯಾತ್ರೆ ಕೈಗೊಂಡವನ ವಿರುದ್ಧ ಯಾರೂ ಧಿಕ್ಕಾರ ಕೂಗುವುದಿಲ್ಲ.

ಎಂ.ಬಿ.ಕೋದಾನಪೂರ, ಸವದತ್ತಿ.

ಸಲೀಂ-ಅನಾರ್ಕಲಿ ಮತ್ತೆ ಜನ್ಮತಾಳಿ ಬಂದರೆ ಏನಾಗುತ್ತೆ?

ವ್ಯಾಲೆಂಟೈನ್ಸ್ ಡೇ ಕಳೆಕಟ್ಟುತ್ತದೆ!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ

ಲಾಯರ್ ಮನೆ ನಾಯಿ ವಾಯಿದೆ ಪದ್ಧತಿಯಲ್ಲಿ ಬೊಗಳುತ್ತೆ; ವೈದ್ಯರದೋ ದಿನಕ್ಕೆ ಮೂರು ಬಾರಿ. ಮಂತ್ರಿಗಳ ನಾಯಿ?

ಬೊಗಳಲೂ ಲಂಚವಿತ್ತಾಗ ಮಾತ್ರ.

ಎ.ಎಸ್.ಸ್ವಾಮಿ, ಶೋರಾಪೂರ

ಬಿಳಿ ಕಾಗೆಗೂ, ಬಿಳಿ ಆನೆಗೂ ಇರುವ ವ್ಯತ್ಯಾಸ?

ಬಿಳಿ ಕಾಗೆ ಮೃಗಾಲಯಗಳಲ್ಲಿರುತ್ತದೆ, ಬಿಳಿ ಆನೆಗಳು ಪಾರ್ಲಿಮೆಂಟ್‌ನಲ್ಲಿರುತ್ತವೆ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

ಮನೆ ಕಾಯಲು ಎಲ್ಲರೂ ನಾಯಿಯನ್ನೇ ಸಾಕುತ್ತಾರಲ್ಲ, ಏಕೆ?



ಹಾಗೇನಿಲ್ಲ. ಕೆಲವರು ಮನೆ ಅಳಿಯನನ್ನು ಸಾಕುತ್ತಾರೆ.

■ ರಾಮ್